ಆರಿಸಿಕೊಂಡಿದ್ದಾರೆ. ಕೆಲವರು ಅಕ್ಕನನ್ನು ಅಪ್ಪಿಕೊಂಡರೆ, ಇನ್ನು ಕೆಲವರು ಅಲ್ಲಮ, ಬಸವ, ಮಾದಾರ ಮಾಚಯ್ಯ, ಕನಕ, ಪುರಂದರ, ಶರೀಫರನ್ನ ಒಪ್ಪಿಕೊಂಡಿದ್ದಾರೆ; ಮತ್ತೆ ಕೆಲವರು ಬುದ್ಧನಿಗೆ ಆಕರ್ಷಿತರಾಗಿದ್ದಾರೆ. ಇಂದಿನ ಕಾಲದ ಅಗತ್ಯ ಇದು. ನೀನು ಇವರಲ್ಲಿ ಯಾರನ್ನೇ ಆದರೂ ಸ್ವೀಕರಿಸಿಕೊಂಡಿದ್ದೀಯಾ?'

'ಇಲ್ಲ, ಮೇಡಂ, ನನಗದು ಹೊಳೆಯಲಿಲ್ಲ.'

'ಕೆಲವರು ರಾಮಕೃಷ್ಣರನ್ನು, ಕೆಲವರು ರಮಣರನ್ನು, ಮತ್ತೆ ಕೆಲವರು ಅರೊಬಿಂದೊರನ್ನು. ಹೋಗಲಿ ಬಿಡು, ಕನಿಷ್ಠ ಕರ್ನಾಟಕದ ಯಾವುದೇ ಲೋಕಲ್ ಸ್ವಾಮೀಜಿಯೊಬ್ಬರನ್ನು? ಎಷ್ಟೊಂದು ಮಂದಿ ಇದ್ದಾರೆ!'

'ನಾನು ಇತರ ವಿಷಯಗಳಲ್ಲಿ ಬಹಳ ಬಿಸಿಯಾಗಿದ್ದೆ, ಮೇಡಂ.'

'ಇತರ ವಿಷಯಗಳಲ್ಲಿ? ಯಾತರ ವಿಷಯಗಳಲ್ಲಿ? ಇಲ್ಲಿದೆ ಎಲ್ಲಾ ಕಟ್ಟಿಂಗ್ಸ್!'

'ಮನುಷ್ಯರ ವಿಷಯಗಳಲ್ಲಿ. ಅಧ್ಯಾತ್ಮ ನನಗೆ ಗೊತ್ತಿಲ್ಲ.'

'ಮತ್ತೆ ನೀನು ಮೇನ್‌ಸ್ಟ್ರೀಮಿಗೆ ಬರುವುದು ಹೇಗೆ ಸಾಧ್ಯ? ಈ ನನ್ನ ಎಡ ಬಲ ಕೂತವರನ್ನು ನೋಡು. ಎಂಥಾ ಮಹಾತ್ಮರು! ಪ್ರೊಫೆಸರ್ ರಾಮಭದ್ರ ಅಯ್ಯಂಗಾರ್. ಜ್ಞಾನಭಂಡಾರಿ. ನನ್ನ ಪಿಎಚ್.ಡಿ. ಗುರುಗಳೂ ಹೌದು. ಇಪ್ಪತ್ತು ವರ್ಷಗಳ ಹಿಂದೆ ತಿರುವಳ್ಳುವರ್ ಬಗ್ಗೆ ಲಂಡನಿನ ಇಂಡಿಯಾ ಸೊಸೈಟಿಯಲ್ಲಿ ಅವರು ನೀಡಿದ ಭಾಷಣವನ್ನು ಬೀಟ್ ಮಾಡಿದವರೇ ಇಲ್ಲ. ಇನ್ನು ಡಾಕ್ಟರ್ ಅಲ್ಲಂ ನಾಯ್ಡು. ಕಲ್ಚರಲ್ ಕಮಿಶನ್ ಅಧ್ಯಕ್ಷರು. ಲೋಕವನ್ನು ಹತ್ತು ಬಾರಿ ಸುತ್ತಿಬಂದಿದ್ದಾರೆ. ಬಹರೈನ್‌ನ ಸುಲ್ತಾನ ಡಾಕ್ಟರ್ ನಾಯ್ಡು ಅವರನ್ನು ಒಂದು ದಿನ ಕೋಣೆಯಲ್ಲಿ ಕೂಡಿ ಹಾಕಿ ಇರಿಸಿದ. ಯಾಕೆ? ನಿಮ್ಮಂಥವರು ನನ್ನ ರಾಜ್ಯದಿಂದ ಹೋಗಬಾರದು ಎಂದು. ನಂತರ ವರ್ಷಕ್ಕೆ ಒಮ್ಮೆ ಭೇಟಿಕೊಡುವ ಶರತಿನಲ್ಲಿ ಬಿಡುಗಡೆ ಮಾಡಿದ. ನಾಯ್ಡು ಈ ಮೀಟಿಂಗ್ ಕಳೆದ ಕೂಡಲೇ ಬಹರೈನ್‌ಗೆ ಹಾರುತ್ತಾರೆ. ಆದ್ದರಿಂದಲೇ ನಾನವರನ್ನು ಡಿಕನ್‌ಸ್ಟ್ರಕ್ಷನ್ ಬಗ್ಗೆ ಮಾತಾಡಲು ಬಿಡಲಿಲ್ಲ. ಅವರು ಅದರ ಬಗ್ಗೆ ಮಾತಾಡಹೊರಟರೆ ನಾವೆಲ್ಲ ಯಕ್ಷಿಣಿಗೆ ಒಳಗಾಗಿ ಕಾಲ ದೇಶ ಮರೆತುಬಿಡುತ್ತೇವೆ. ಇಂಥ ನಕ್ಷತ್ರದ್ವಯರೆದುರು ಕಾಣಿಸಿಕೊಳ್ಳುವುದು ನಿನ್ನ ಭಾಗ್ಯ ಎಂದು ತಿಳಿ.'

ನಾನೇನೂ ಮಾತಾಡಲಿಲ್ಲ.

'ಏನು ಹೇಳ್ತ ಇದ್ದೇನೆ ಎಂದರೆ, ನಾನು ಮನುಷ್ಯರ ವಿಷಯಗಳ ಬಗ್ಗೆ ಯೋಚಿಸುತ್ತೇನೆ ಎಂಬ ಕಾಲ ಇದಲ್ಲ. ನಾವು ನಮ್ಮ ಕಲ್ಚರ್ ಬಗ್ಗೆ ಚಿಂತಿಸತಕ್ಕದ್ದು. ದ ಸ್ಲೋಗನ್ ಈಜ್ ರಿಟರ್ನ್!'

'ರಿಟರ್ನ್? ಎಲ್ಲಿಗೆ?'

'ಎಲ್ಲಿಂದ ಬಂದಿದ್ದೇವೋ ಅಲ್ಲಿಗೆ. ಟು ದ ರೂಟ್ಸ್. ಕೊಲೊನಿಯಲ್ ಕಾಲದಿಂದ ಈಚೆಗಿನದ್ದೆಲ್ಲವನ್ನು ರಿಜೆಕ್ಟ್. ಹಿಂದಕ್ಕೆ ಹೋಗು. ಹಿಂದು ಹಿಂದಕ್ಕೆ, ಆದಷ್ಟೂ ಹಿಂದಕ್ಕೆ. ಗೋ ಬ್ಯಾಕ್. ಮುಂದಕ್ಕೆ ಹೋಗಲು ಇಚ್ಛಿಸುವವರು ಹಿಂದಕ್ಕೆ ಹೋಗಲು ಕಲಿಯಬೇಕು. ಹೋಗಿ ಪ್ರೋಟೋ ಸ್ಟೇಟ್ ತಲಪಬೇಕು. ಅದೇ ನಮ್ಮ ಪರಮಪದ. ನನ್ನ ಪಿಎಚ್.ಡಿ. ಮಹಾಪ್ರಬಂಧ ಓದಿದ್ದೀಯಾ?'

'ಇಲ್ಲ ಮೇಡಂ.'

'ಇನ್ ಸರ್ಚ್ ಆಫ್ ಪ್ರೋಟೋಸ್ಟೇಟ್: ಟುಮಾರೋಸ್ ಪ್ರೋಗ್ರಾಮ್ ಫಾರ್ ಯೆಸ್ಟರ್ಡೇ.'

'ಟುಮಾರೋಸ್ ಪ್ರೋಗ್ರಾಮ್ ಫಾರ್ ಯೆಸ್ಟರ್ಡೇ?'

'ಇಟ್ ವನ್ ಪ್ರಸಿಡೆಂಟ್ಸ್ ಮೆಡಲ್ ಫಾರ್ ಎಕ್ಸೆಲೆನ್ಸ್!' ಎಂದರು ಅಯ್ಯಂಗಾರರು ಹೆಮ್ಮೆಯಿಂದ.

'ಯುನೆಸ್ಕೋ ಕೂಡಾ ಒಂದು ಪ್ರತಿ ಕೇಳಿದೆ!' ಎಂದರು ನಾಯ್ಡು, ಸ್ವಯಂ ಚಪ್ಪಾಳೆ ಬಾರಿಸುತ್ತ.